GMR

**ಜಿಎಂಆರ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್**

ನೋಂದಾಯಿತ ಕಚೇರಿ: ಸ್ಕಿಪ್ ಹೌಸ್, 25/1, ಮ್ಯೂಜಿಯಮ್ ರೋಡ್, ಬೆಂಗಳೂರು – 560 025, ಕರ್ನಾಟಕ, ಭಾರತ.
ಫೋನ್: **+90 80 40534000** ಫ್ಯಾಕ್ಸ್: **+90 80 22279353** ಇ-ಮೇಲ್: **Gil.Cosecy@gmrgroup.in**

www.gmrgroup.in CIN: L45203KA1996PLC034805

# ಸೂಚನೆ

ಎಜಿಎಮ್ ನೋಟೀಸಿನಲ್ಲಿ ವಿವರಿಸಿದ ವ್ಯಾಪಾರಿ ವ್ಯವಹಾರಗಳನ್ನು ಮಾಡಲೆಂದು, ಬುಧವಾರ, ಸೆಪ್ಟಂಬರ್ 23, 2015 ರಂದು ಮಧ್ಯಾಹ್ನ 3:00 ಗಂಟೆಗೆ, ಎಮ್‌ಎಲ್‌ಆರ್ ಕನ್ವೆನ್ಷನ್ ಸೆಂಟರ್, ಬ್ರಿಗೇಡ್ ಮಿಲೇನಿಯಮ್ ಕ್ಯಾಂಪಸ್, 7ನೇ ಹಂತ, ಜೆ.ಪಿ. ನಗರ, ಬೆಂಗಳೂರು – 560 078, ಇಲ್ಲಿ ಜಿಎಮ್‌ಆರ್ ಇನಫ್ರಾಸ್ಟ್ರಕ್ಚರ್ ಲಿಮಿಟೆಡ್‌ನ ಸದಸ್ಯರಿಗಾಗಿ 19ನೇ ವಾರ್ಷಿಕ ಸರ್ವಸಾಧಾರಣ ಸಭೆ ('ಎಜಿಎಮ್')ಯನ್ನು ಕರೆಯಲು ಈ ಮೂಲಕ ನೋಟೀಸನ್ನು ಕೊಡಲಾಗುತ್ತಿದೆ. ಕಂಪನಿಯು ಸದಸ್ಯರಿಗೆ, ಅವರ ನೋಂದಾಯಿತ ವಿಳಾಸಕ್ಕೆ ಮತ್ತು ಆಯಾ ಡಿಪಾಸಿಟರಿ ಪಾರ್ಟಿಸಿಪಂಟ್‌ರಲ್ಲಿರುವ ಅಥವಾ ಕಂಪನಿಯಲ್ಲಿರುವ ನೋಂದಾಯಿತ ಇ-ಮೇಲ್ ವಿಳಾಸಕ್ಕೆ ಆಗಸ್ಟ್ 28, 2015 ರಂದು ಕಂಪನಿಯ ಕಾಯ್ದೆ 2013ರ ಪರಿಚ್ಛೇದ 102 ರ ಪ್ರಕಾರ ವಿವರಣೆಯ ಹೇಳಿಕೆಯೊಂದಿಗೆ ಎಜಿಎಮ್ ನೋಟೀಸನ್ನು ಮತ್ತು ಮಾರ್ಚ್ 31, ವರ್ಷ 2015 ಕೊನೆಯ ವಾರ್ಷಿಕ ವರದಿಯನ್ನು ಕಳುಹಿಸಿ ಕೊಡುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ. ಕಂಪನಿಯ ವಾರ್ಷಿಕ ವರದಿ ಕಂಪನಿಯ ಜಾಲತಾಣ: **www.gmrgroup.in** ನಲ್ಲಿ ಕೂಡ ಲಭ್ಯವಾಗಿದೆ.

ತಿದ್ದುಪಡಿ ನಿಯಮಾವಳಿ, 2015 ಕಂಪನಿಗಳ ನಿಯಮಾವಳಿ 20 ರೊಂದಿಗೆ (ಮ್ಯಾನೇಜಮೆಂಟ್ ಆ್ಯಂಡ್ ಎಡ್ಮಿನಿಸ್ಟ್ರೇಶನ್) ಓದಲಾಗುವ ಕಂಪನಿಯ ಕಾಯ್ದೆ, 2013 ರ ಪರಿಚ್ಛೇದ 108 ರ ಪ್ರಕಾರ, ಸದಸ್ಯರು ಎಜಿಎಮ್ ಜಾಗವನ್ನು ಹೊರತುಪಡಿಸಿ ಮೆ. ಕರ್ವಿ ಕಂಪ್ಯೂಟರ್‌ಶೇರ್ ಪ್ರೈವೇಟ್ ಲಿಮಿಟೆಡ್('ಆರ್‌ಟಿಎ') ಒದಗಿಸುವ ಜಾಗದಿಂದ ಇಲೆಕ್ಟ್ರಾನಿಕ್ ವೋಟಿಂಗ್ ಸಿಸ್ಟೆಮ್ ಅನ್ನು ('ರಿಮೋಟ್ ಇ-ವೋಟಿಂಗ್') ಬಳಸಿಕೊಂಡು ಎಜಿಎಮ್ ನೋಟೀಸಿನಲ್ಲಿ ಹೇಳಿದ ಎಲ್ಲ ಗೊತ್ತುವಳಿಯ ಮೇಲೆ ತಮ್ಮ ವೋಟುಗಳನ್ನು ಹಾಕುವ ಸೌಲಭ್ಯವನ್ನು ಕಲ್ಪಿಸಲಾಗಿದೆ ಮತ್ತು ಇಂಥ ವೋಟಿಂಗ್ ಮೂಲಕ ವ್ಯಾಪಾರ ಚಟುವಟಿಕೆಗಳನ್ನು ಮಾಡಲಾಗುತ್ತದೆ. ಇ-ವೋಟಿಂಗ್ ಅವಧಿ ಸೆಪ್ಟಂಬರ್ 20, ಮುಂಜಾನೆ 9:00 ಗಂಟೆಯಿಂದ ಆರಂಭಗೊಂಡು ಸೆಪ್ಟಂಬರ್ 22 (ಎರಡೂ ದಿನಗಳು ಸಮಾವೇಶಗೊಂಡು) ಸಂ. 5:00 ಗಂಟೆಗೆ ಮುಕ್ತಾಯಗೊಳ್ಳುತ್ತದೆ. ಶೇರುಗಳನ್ನು ಕಾಗದದ ರೂಪದಲ್ಲಿ ಅಥವಾ ಡಿಮ್ಯಾಟ್ ರೂಪದಲ್ಲಿ ಹೊಂದಿದ ಕಂಪನಿಯ ಸದಸ್ಯರು, ಕಟ್–ಆಫ್ ದಿನಾಂಕ, ಅಂದರೆ ಸೆಪ್ಟಂಬರ್ 16, 2015 ನ್ನು ಗಮನದಲ್ಲಿಟ್ಟುಕೊಂಡು ಇಲೆಕ್ಟ್ರಾನಿಕಲ್ಲಿ ತಮ್ಮ ಮತಗಳನ್ನು ಚಲಾಯಿಸಬಹುದಾಗಿದೆ. ಒಮ್ಮೆ ಸದಸ್ಯರು ಒಂದು ಗೊತ್ತುವಳಿಯ ಮೇಲೆ ತಮ್ಮ ಮತವನ್ನು ಚಲಾಯಿಸಿದಲ್ಲಿ, ಮೇಲಿಂದ ಮೇಲೆ ಅದನ್ನು ಬದಲಿಸುವಂತಿಲ್ಲ. ಇ-ವೋಟಿಂಗ್ ಮಾಡ್ಯೂಲ್ ಸೆಪ್ಟಂಬರ್ 22, 2015ರಂದು ಸಂಜೆ 5:00 ಗಂಟೆಗೆ ನಿಷ್ಕ್ರಿಯಗೊಳ್ಳುತ್ತದೆ. ಸದಸ್ಯರ ಮತಗಳ ಸಂಖ್ಯೆ ಸೆಪ್ಟಂಬರ್ 16, 2015 ರಂದು ಕಂಪನಿಯ ಪೇಡ್ ಅಪ್ ಇಕ್ವಿಟಿ ಶೇರ್ ಕ್ಯಾಪಿಟಲ್‌ನಲ್ಲಿರುವ ತಮ್ಮ ಇಕ್ವಿಟಿ ಶೇರುಗಳ ಸಮಪ್ರಮಾಣದಲ್ಲಿ ಇರುತ್ತದೆ. ಕಟ್–ಆಫ್ ದಿನಾಂಕದಂದು ಆಗುವ ಕಂಪನಿಯ ಯಾವುದೇ ಸದಸ್ಯರು ರಿಮೋಟ್ ಇ-ವೋಟಿಂಗ್ ಮೂಲಕ ಅಥವಾ ಎಜಿಎಮ್‌ನಲ್ಲಿ ಮತ ಚಲಾಯಿಸುವುದರ ಮೂಲಕ ಎಲ್ಲ ಗೊತ್ತುವಳಿಯ ಮೇಲೆ ತಮ್ಮ ಮತವನ್ನು ಚಲಾಯಿಸಲು ಅರ್ಹತೆಯನ್ನು ಪಡೆದುಕೊಳ್ಳುತ್ತಾರೆ.

ಎಜಿಎಮ್‌ನಲ್ಲಿ ಪೋಲಿಂಗ್ ಪೇಪರ್ ಮೂಲಕ ಕೂಡ ಮತ ಚಲಾಯಿಸುವ ಸೌಲಭ್ಯವನ್ನು ಕಲ್ಪಿಸಿಕೊಡಲಾಗುತ್ತದೆ ಮತ್ತು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸದಿರುವ ಸದಸ್ಯರು ಎಜಿಎಮ್ ನಲ್ಲಿ ತಮ್ಮ ಹಕ್ಕನ್ನು ಚಲಾಯಿಸಬಹುದಾಗಿದೆ. ಎಜಿಎಮ್‌ಗಿಂತ ಮುಂಚೆ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಿದ ಸದಸ್ಯರು ಎಜಿಎಮ್‌ನಲ್ಲಿ ಹಾಜರಾಗಬಹುದು, ಆದರೆ ಅವರು ತಮ್ಮ ಮತವನ್ನು ಮತ್ತೊಮ್ಮೆ ಚಲಾಯಿಸುವಂತಿಲ್ಲ. ಯಾವುದೇ ವ್ಯಕ್ತಿ ಎಜಿಎಮ್ ನೋಟೀಸು ಕಳುಹಿಸಿದ ನಂತರ ಶೇರು ಪಡೆದುಕೊಂಡು ಕಂಪನಿಯ ಸದಸ್ಯರಾದಲ್ಲಿ ಮತ್ತು ಕಟ್–ಆಫ್ ದಿನಾಂಕದಂದು ಅವರು ಶೇರುಗಳನ್ನು ಹೊಂದಿದ್ದಲ್ಲಿ, **evoting@karvy.com** ಗೆ ವಿನಂತಿಯನ್ನು ಕಳುಹಿಸಿ ಲಾಗಿನ್ ಐಡಿ ಮತ್ತು ಪಾಸ್ ವರ್ಡ್‌ನ್ನು ಪಡೆದುಕೊಳ್ಳಬಹುದು.

ಕಂಪನಿಯ ದಾಖಲೆಯ ಪುಸ್ತಕವನ್ನು ( ರಜಿಸ್ಟರ್) ಸೆಪ್ಟಂಬರ್ 16, 2015 ರಿಂದ ಸೆಪ್ಟಂಬರ್ 23, 2015 ರವರೆಗೆ (ಎರಡೂ ದಿನಗಳು ಸಮಾವೇಶಗೊಂಡು) ಮುಚ್ಚಲಾಗುವುದು, ಈ ಅವಧಿಯಲ್ಲಿ ಯಾವುದೇ ಶೇರುಗಳ ವರ್ಗಾವಣೆಯನ್ನು ನೋಂದಾಯಿಸಿಕೊಳ್ಳಲಾಗುವುದಿಲ್ಲ. ಕಟ್–ಆಫ್ ದಿನಾಂಕದಂದು ದಾಖಲೆ ಪುಸ್ತಕದಲ್ಲಿ ಹೆಸರು ದಾಖಲೆಗೊಂಡ ವ್ಯಕ್ತಿ ಮಾತ್ರ ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಮ್ ನಲ್ಲಿ ಮತ ಚಲಾಯಿಸುವ ಹಕ್ಕನ್ನು ಪಡೆದುಕೊಳ್ಳುತ್ತಾರೆ. ಇ-ವೋಟಿಂಗ್ ಬಗೆಗಿನ ವಿವರವಾದ ಮಾಹಿತಿಗಾಗಿ, ಸದಸ್ಯರು ಎಜಿಎಮ್ ನೋಟೀಸನ್ನು ನೋಡಬಹುದಾಗಿದೆ. ಇ-ವೋಟಿಂಗ್ ವಿಷಯದಲ್ಲಿನ ಯಾವುದೇ ಶಂಕೆ ಅಥವಾ ದೂರುಗಳಿದ್ದಲ್ಲಿ ಸದಸ್ಯರು ಶ್ರೀ. ಎಸ್.ವ್ಹಿ. ರಾಜೂ, ಡಿಜಿಎಮ್, ಮೆ. ಕರ್ವಿ ಕಂಪೂಟರ್‌ಶೇರ್ ಪ್ರೈವೇಟ್ ಲಿಮಿಟೆಡ್ ಅವರನ್ನು ಸಂಪರ್ಕಿಸಬಹುದು; ದೂರವಾಣಿ: **+91-40-67161500**; ಇ–ಮೇಲ್: **einward.ris@karvy.com.**

ಎಜಿಎಮ್ ನಲ್ಲಿ ಭಾಗವಹಿಸಿ ಮತ ಚಲಾಯಿಸುವ ಅರ್ಹತೆ ಹೊಂದಿರುವ ಸದಸ್ಯರು ತಮ್ಮ ಬದಲಾಗಿ ಸಭೆಯಲ್ಲಿ ಭಾಗವಹಿಸಿ ಪೋಲ್ ಮತದಾನ ಪದ್ಧತಿಯಲ್ಲಿ ಮತ ಹಾಕಲು ಪ್ರಾಕ್ಸಿಯನ್ನು (ಬದಲಿ ಪ್ರತಿನಿಧಿ) ನೇಮಕ ಮಾಡಬಹುದು. ಪ್ರಾಕ್ಸಿ ಕಂಪನಿಯ ಸದಸ್ಯರಾಗಿರಬೇಕೆಂದೇನಿಲ್ಲ.

ಪ್ರಾಕ್ಸಿಗಳನ್ನು ಊರ್ಜಿತರನ್ನಾಗಿ ಮಾಡಲು ಸಭೆ ಆರಂಭವಾಗುವ 48 ಗಂಟೆಗಳ ಒಳಗಾಗಿ ಪ್ರಾಕ್ಸಿ ಫಾರ್ಮ್‌ನ್ನು ಕಂಪನಿಯ ನೋಂದಾಯಿತ ಕಚೇರಿಗೆ ತಲುಪಿಸಬೇಕು.

ಹಸಿರು ಅಭಿಯಾನದ ಬೆಂಬಲಕ್ಕಾಗಿ, ಇಲ್ಲಿಯವರೆಗೆ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳದ ಸದಸ್ಯರು, ತಮ್ಮ ಡಿಪಾಸಿಟರಿ ಪಾರ್ಟಿಸಿಪಂಟ್ಸ್ ಮೂಲಕ ಅವರಲ್ಲಿ ಇಲೆಕ್ಟ್ರಾನಿಕ್ ಹೋಲ್ಡಿಂಗ್‌ಗಳಿಗಾಗಿ ಇ–ಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳುವಂತೆ ವಿನಂತಿಸಿಕೊಳ್ಳಬೇಕು. ಕಾಗದ ರೂಪದ ಶೇರುಗಳನ್ನು ಹೊಂದಿದ ಸದಸ್ಯರು ಕಂಪನಿಯ ಜಾಲತಾಣದಲ್ಲಿ **(www.gmrgroup.in)** ಲಭ್ಯವಿರುವ ಫಾರ್ಮ್‌ನ್ನು ತುಂಬಿಸಿ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸಿಕೊಳ್ಳುವಂತೆ ವಿನಂತಿಸಿಕೊಳ್ಳಬೇಕು ಮತ್ತು ಮೆ. ಕರ್ವಿ ಕಂಪ್ಯೂಟರ್‌ಶೇರ್ ಪ್ರೈವೇಟ್ ಲಿಮಿಟೆಡ್, ರಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸಫರ್ ಏಜೆಂಟ್, ಕರ್ವಿ ಸೆಲೆನಿಯಮ್ ಟಾವರ್ ಬಿ, ಪ್ಲಾಟ್ 31–32, ಗಚಿಬೊವ್ಲಿ, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಾಕ್ರಮಗುಡಾ, ಹೈದರಾಬಾದ್– 500 032 ಗೆ ಕಳುಹಿಸಿಕೊಡಬೇಕು.

ನಿರ್ದೇಶಕ ಮಂಡಳಿಯ ಆದೇಶದ ಮೇರೆಗೆ
**ಜಿಎಮ್‌ಆರ್ ಇನಫ್ರಾಸ್ಟ್ರಕ್ಚರ್ ಲಿಮಿಟೆಡ್**
ಸಹಿ/-
ಎ.ಎಸ್. ಚೆರುಕುಪಲ್ಲಿ
ಕಂಪನಿಯ ಕಾರ್ಯದರ್ಶಿ ಮತ್ತು ಪರಿಪಾಲನಾ ಅಧಿಕಾರಿ

**ಸ್ಥಳ:** ಬೆಂಗಳೂರು
**ದಿನಾಂಕ:** 29.08.2015

GMR GROUP - GIL / 103 / PREM ASSOCIATES - KAN

Size : 21cms (H) x 8cms (W)
Prepare Date : 01-09-2015
Publication : Samyukta Karnataka - Bangalore (Kannada)